ಇಂದು ದಿಃ 18.02.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನನಗೆ ಈಗ 71 ವರ್ಷ. ರಾಚಶೆಟ್ಟಿ ಬಿನ್ ಆಲಂಬೂರು ರಾಚಶೆಟ್ಟಿ ನನ್ನ ತಂದೆ. ಸಿದ್ದಮ್ಮ ನನ್ನ ತಾಯಿ. ನಮ್ಮ ತಂದೆಗೆ ಒಟ್ಟು 7 ಜನ ಮಕ್ಕಳು, ಆ ಪೈಕಿ 1ನೇಯವರು ನಾನು, 2ನೆಯವರು ದೊಡ್ಡತಾಯಮ್ಮ, ಮಾರ್ಕಂಡಯ್ಯ, ಮಾದಶೆಟ್ಟಿ, ಸಾಕಮ್ಮ, ಗೌರಮ್ಮ ಮತ್ತು ಕೊನೆಯವರು ಬಸವರಾಜಶೆಟ್ಟಿ. ದೊಡ್ಡತಾಯಮ್ಮ ಮೃತಪಟ್ಟಿದ್ದು ಗೋವಿಂದಸ್ವಾಮಿ ಮತ್ತು ಸಿದ್ದಮಣಿ ಎಂಬ ಮಕ್ಕಳು ಇದ್ದಾರೆ. ದಾವೆಗೆ ಸಂಬಂಧಪಟ್ಟ ವಿಚಾರ ನನಗೆ ಗೊತ್ತು. ದಾವಾ ಆಸ್ತಿಗಳನ್ನು ಒಟ್ಟು ಕುಟುಂಬದ ಆದಾಯದಿಂದ ನನ್ನ ತಂದೆ ಮತ್ತು ನನ್ನ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದರೆ ನನ್ನ ತಂದೆ ಸ್ವಂತ ಮಾಡಿರುವುದು ನಾನು ಅದಕ್ಕೆ ಭಾಗಿಯಾಗಿಲ್ಲ.

ನಾನು 40 ವರ್ಷಗಳಿಂದ ಗುತ್ತಿಗೆ ಕೆಲಸ ಮಾಡುತ್ತೇನೆ. ನನಗೆ ಗುತ್ತಿಗೆ ಕೆಲಸ ಮಾಡಲು ಪರವಾನಿಗೆ ಇಲ್ಲ. ನಾನು ವ್ಯವಸಾಯಗಾರ ಎಂದು ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ ಆದರೆ ವ್ಯವಸಾಯ ಮಾಡುತ್ತಿಲ್ಲ. ನನ್ನ ತಂದೆ 2012ರಲ್ಲಿ ಮೃತರಾದರು. ನನ್ನ ತಂದೆ ಮೃತಪಡುವ 1 ವರ್ಷಗಳಿಂದ ಖಾಯಿಲೆ ಬಿದ್ದಿದ್ದರು. ನಾನು ಈಗ ನಂಜನಗೂಡಿನ ದೇವೀರಮ್ಮನ ಹಳ್ಳಿಯಲ್ಲಿ 20 ವರ್ಷಗಳಿಂದ ವಾಸ ಇದ್ದೇನೆ. ಆ ಮೊದಲು ನಾನು ಕರ್ಲಾಪುರದಲ್ಲಿ ವಾಸ ಇದ್ದೆ ಎಂದರೆ ಸರಿಯಲ್ಲ.

ಸರ್ವೆ ನಂ.97/1ರಲ್ಲಿ 2 ಎಕರೆ ಜಮೀನು ಕ್ರಯಕ್ಕೆ ತೆಗೆದುಕೊಂಡಿದ್ದೇನೆ ಎಂದು ಹೇಳಿದ್ದೇನೆ ಅದನ್ನು 1976ರಲ್ಲಿ ಮಾದೇಗೌಡರವರಿಂದ ರೂ 8,000/-ಗಳಿಗೆ ಖರೀದಿಸಿದ್ದೇನೆ. ಅದೇ ಸರ್ವೆ ನಂಬರ್ ನಲ್ಲಿ 97/2ರಲ್ಲಿ 1974ರಲ್ಲಿ ನನ್ನ ತಂದೆ ಜಮೀನು ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. ನಾನು 9ನೇ ತರಗತಿ ಓದಿದ್ದೇನೆ. ನಾನು 4 ರಿಂದ 9ನೇ ತರಗತಿಯನ್ನು ನಂಜನಗೂಡಿನಲ್ಲಿ ಓದಿದ್ದೆ. 1 ರಿಂದ 4ನೇ ತರಗತಿಯನ್ನು ಕರ್ಲಾಪುರದಲ್ಲಿ ಓದಿದ್ದೆ. ನಾನು ನಂಜನಗೂಡಿನಲ್ಲಿ ಓದುವ ಉದ್ದೇಶದಿಂದ ನಾನು ಕರ್ಲಾಪುರದಿಂದ ಬಂದು ನಂಜನಗೂಡಿನ ನನ್ನ ಚಿಕ್ಕಪ್ಪನ ಮನೆಯಲ್ಲಿ ಉಳಿದು ವಿಧ್ಯಾಭ್ಯಾಸ ಮಾಡಲು ಬಂದಿದ್ದೆ. ನಾನು 1965ರಲ್ಲಿಯೇ ನನ್ನ ಚಿಕ್ಕಪ್ಪನ ಮನೆಗೆ ಬಂದಿದ್ದೆ.

ಐಟಂ ನಂ.11 ಅನ್ನು ನಾನು ನಂಜನಗೂಡಿಗೆ ಬಂದು 6 ವರ್ಷಗಳಲ್ಲಿ ಖರೀದಿ ಮಾಡಿದೆ ಎಂದರೆ ಸರಿ. ಆಗ ನಾನು ವಿದ್ಯಾಭ್ಯಾಸ ಮತ್ತು ಕೆಲಸ ಮಾಡುತ್ತಿದ್ದೆ. ಆಗ ನನಗೆ 20 ವರ್ಷ ಪ್ರಾಯ. ಐಟಂ ನಂ.11 ಅನ್ನು ಖರೀದಿಸಲು ನನಗೆ ಆದಾಯ ಇರಲಿಲ್ಲ ಎಂದರೆ ನಾನು ಕೆಲಸ ಮಾಡುತ್ತಿದ್ದ ಕಾರಣ ನನ್ನ ಚಿಕ್ಕಪ್ಪ ಹಣ

ಕೊಡುತ್ತಿದ್ದರು ಆ ಹಣದಿಂದ ಖರೀದಿಸಿದ್ದೇನೆ ಎನ್ನುತ್ತಾರೆ. ಐಟಂ ನಂ.11 ಅನ್ನು ನನ್ನ ತಂದೆ ಹಣ ಕೊಟ್ಟು ನನ್ನ ಹೆಸರಿನಲ್ಲಿ ಖರೀದಿಸಿದರು ಎಂದರೆ ಸರಿಯಲ್ಲ. ಆ ಕಾರಣ ಐಟಂ ನಂ.11 ನನ್ನ ಸ್ವಯಾರ್ಜಿತ ಆಸ್ತಿ ಅಲ್ಲ, ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ನನಗೆ ಆಗ ಸಂಪಾದನೆ ಇತ್ತು ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಕೊಟ್ಟಿಲ್ಲ.

ಐಟಂ ನಂ.15 ರಲ್ಲಿ ಸರ್ವೆ ನಂ.1322/1ರಲ್ಲಿ 1 ಎಕರೆ 32 ಗುಂಟೆ ಜಮೀನು ಇದೆ. ಈ ಜಮೀನನ್ನು ಸಹ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಾನು ಖರೀದಿಸಿಲ್ಲ ಮತ್ತು ನನ್ನ ಹೆಸರಿನಲ್ಲಿ ಇಲ್ಲ. ನಾನು ಆ ಆಸ್ತಿಯನ್ನು ಖರೀದಿಸದ ಕಾರಣ ಕೃಷ್ಣಸ್ವಾಮಿ ಎನ್ನುವವರಿಗೆ ದಾನ ಪತ್ರ ಬರೆಯಲು ಅಧಿಕಾರ ಇರಲಿಲ್ಲ ಎಂದರೆ ನನ್ನ ಚಿಕ್ಕಪ್ಪ ಮಸಣಶೆಟ್ಟಿ ನನ್ನ ಹೆಸರಿನಲ್ಲಿ ಖರೀದಿಸಿ ನಂತರ ಅವರ ಮಗನ ಹೆಸರಿನಲ್ಲಿ ದಾನ ಬರೆಸಿಕೊಂಡರು. ಸರ್ವೆ ನಂ.71ರಲ್ಲಿ 1 ಎಕರೆ 14 ಗುಂಟೆ ಆಸ್ತಿಯನ್ನು ನನಗೆ ಕೊಟ್ಟಿದ್ದರು ಎಂದರೆ ಸರಿ. ನನಗೆ ಕೊಟ್ಟ ಕಾರಣಕ್ಕಾಗಿ ಐಟಂ ನಂ.15ರ ಆಸ್ತಿಯನ್ನು ಚಿಕ್ಕಪ್ಪನ ಮಗನ ಹೆಸರಿಗೆ ದಾನ ಪತ್ರ ಮಾಡಿದ್ದೆ ಎಂದರೆ ಸರಿ.

ಕಮರಹಳ್ಳಿ ಗ್ರಾಮದ ಸರ್ವೆ ನಂ. 366 ರ 5 ಎಕರೆ 22 ಗುಂಟೆ ಜಮೀನು ಸಹ ಒಟ್ಟು ಕುಟುಂಬಕ್ಕೆ ಸೇರಿದ ಜಮೀನು ಅಂದರೆ ಸರಿಯಲ್ಲ, ಅದು 1976 ರಲ್ಲಿ ನಾನು ಖರೀದಿಸಿದ ಆಸ್ತಿ ಎನ್ನುತ್ತಾರೆ. 1976ರಲ್ಲಿ ನನಗೆ 21 ವರ್ಷ. ನಾನು ರೂ 6,000/-ಗಳಿಗೆ ಸದರಿ ಆಸ್ತಿಯನ್ನು ಮಾದನಾಯಕರವರಿಂದ ಖರೀದಿ ಮಾಡಿರುತ್ತೇನೆ. ಖರೀದಿ ದಿನವೆ ನಾನು ರೂ 6,000/- ಹಣವನ್ನು ಮಾದನಾಯಕನಿಗೆ ಕೊಟ್ಟಿರುತ್ತೇನೆ. ಖರೀದಿ ಪತ್ರವನ್ನು ನಾನು ನೋಡಿದ್ದೇನೆ ಮತ್ತು ಅದರ ವಿವರಗಳು ಗೊತ್ತು. ನಾನು ಖರೀದಿ ಮಾಡುವ ಪೂರ್ವದಲ್ಲಿಯೇ ಸದರಿ ಆಸ್ತಿಯು ನನ್ನ ತಂದೆಗೆ ಆಧಾರವಾಗಿತ್ತು. ಹಣ ನಾನು ಕೊಟ್ಟಿದ್ದೆ. ಇದೇ ಜಮೀನು ಮರಿಸಿದ್ದಶೆಟ್ಟಿರವರಿಗೆ ಭೋಗ್ಯ ಆಗಿತ್ತು, ಅದಕ್ಕೂ ಸಹ ನಾನೇ ಹಣ ಕೊಟ್ಟಿದ್ದೆ. ಆಧಾರ ಪತ್ರ, ಆನ್ ಡಿಮಾಂಡ್ ಪ್ರಾಮಿಸರಿ ನೋಟ್ ಇತ್ಯಾದಿ ಹಣವನ್ನು ನಾನೆ ಕೊಟ್ಟಿದ್ದೆ ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಆ ರೀತಿಯಾಗಿ ನಾನು ಯಾವುದೇ ಆಸ್ತಿಯನ್ನು ನಾನು ಖರೀದಿ ಮಾಡಿಲ್ಲ, ನನ್ನ ತಂದೆಯೇ ಖರೀದಿಸಿದ್ದರು ಎಂದರೆ ಸರಿಯಲ್ಲ. ಆ ಕ್ರಯ ಪತ್ರಗಳನ್ನು ದುರುಪಯೋಗಪಡಿಸಿಕೊಂಡು ವಾದಿಗಳಿಗೆ ಮೋಸ ಮಾಡಲು ನಾನೇ ಖರೀದಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿಸಿದ್ದೆ ಎನ್ನುವ ಐಟಂ 19ರ ಆಸ್ತಿಯನ್ನು ನಾನು ಮತ್ತು ನನ್ನ ಕುಟುಂಬದವರು ದಿನಾಂಕ 02.05.2015ರಂದು 13ನೇ ಪ್ರತಿವಾದಿಗೆ ರೂ 55,50,000/- ಲಕ್ಷಕ್ಕೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಮಾರಾಟವಾದ ವಿಚಾರವನ್ನು ವಾದಿಗಳಿಗಾಗಲೀ ಪ್ರತಿವಾದಿಗಳಿಗಾಗಲೀ ತಿಳಿಸಿಲ್ಲ. ಮಾರಾಟವಾದ ನಂತರ ವಾದಿಗಳು ನನ್ನನ್ನು ಭೇಟಿಯಾಗಿ ಅದು ಕುಟುಂಬದ ಆಸ್ತಿ ಅದರಲ್ಲಿ ಭಾಗ ಕೊಡಿ ಎಂದು ನನ್ನ ಬಳಿ ಕೇಳಿದರು ಎಂದರೆ ಸರಿಯಲ್ಲ. ನಾನು ಭಾಗ ಕೊಡುವುದಿಲ್ಲ ಅದು ನನ್ನ ಆಸ್ತಿ ಎಂದು ನಿರಾಕರಿಸಿದ್ದೆ ಎಂದರೆ ಸರಿಯಲ್ಲ ಅವರು ನನ್ನ ಬಳಿ ಕೇಳಿಲ್ಲ ಎನ್ನುತ್ತಾರೆ. 19ನೇ ಐಟಂ ಆಸ್ತಿಯನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಆಸ್ತಿಯಾಗಿದ್ದು 13ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿಯು ವಾದಿಗೆ ಬದ್ಧಪಡಿಸುವುದಿಲ್ಲ ಎಂದರೆ ಸರಿಯಲ್ಲ.

18ನೇ ಐಟಂ ಆಸ್ತಿ ಸರ್ವೆ ನಂ.364/2ರ 2 ಎಕರೆ 7 ಗುಂಟೆ ಆಸ್ತಿಯನ್ನು ನಾನು ಖರೀದಿಸಿದ್ದೇನೆ. ನನ್ನ ಹೆಸರಿಗೆ ದಿನಾಂಕ 25.07.1974 ರಂದು ನೊಂದಾವಣೆಯಾಗಿದೆ. 1974ರಲ್ಲಿ ನನಗೆ 18 ವರ್ಷ. ಆಗ ನನಗೆ ಆದಾಯ ಇರಲಿಲ್ಲ, ಆದರೆ ನನ್ನ ಚಿಕ್ಕಪ್ಪನ ಬಳಿ ಹಣ ಇತ್ತು ಅವರು ಕೊಟ್ಟ ಹಣದಿಂದ ನಾನು ಸಿದ್ದನಾಯಕನಿಂದ ರೂ 2500/-ಗಳಿಗೆ ಖರೀದಿ ಮಾಡಿರುತ್ತೇನೆ. ನೊಂದಾವಣಿಯಾದ ದಿನ ಖರೀದಿ ಹಣವನ್ನು ಕೊಟ್ಟರು. ಆ ರೀತಿ ಕ್ರಯ ಪತ್ರದಲ್ಲಿ ನಮೂದು ಮಾಡಿಸಿದ್ದೇನೆ. 18ನೇ ಆಸ್ತಿಯನ್ನು ನನ್ನ ಹೆಸರಿಗೆ ಬರೆಸುವ ಪೂರ್ವದಲ್ಲಿ ನನ್ನ ತಂದೆ ಹೆಸರಿಗೆ ಆಧಾರ ಆಗಿತ್ತು ಎಂದರೆ ಸುಳ್ಳು. 18ನೇ ಆಸ್ತಿ ಆದಾರವಾಗಿತ್ತು. ಹಣಕಾಸಿನ ಅವಶ್ಯಕತೆಗಾಗಿ ನನ್ನ ಹೆಸರಿಗೆ ಕ್ರಯ ಮಾಡಿಸಿದ್ದಾರೆ ಎಂದರೆ ಸುಳ್ಳು. ಕ್ರಯವಾದ ದಿನ ಯಾವುದೆ ಹಣ ಕೊಟ್ಟಿಲ್ಲ, ಮೊದಲೇ ಹಣ ಪಾವತಿಯಾಗಿತ್ತು ಎಂದರೆ ಮೊದಲು ಅಲ್ಪಸ್ವಲ್ಪ ತೆಗೆದುಕೊಳ್ಳುತ್ತಿದ್ದರು ನಂತರ ನನ್ನ ಹೆಸರಿನಲ್ಲಿ ನೊಂದಾವಣೆಯಾಯಿತು.

ಐಟಂ ನಂ.11, 15, 16, 18, 19ರ ಆಸ್ತಿಯ ಮೂಲ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸಾಕ್ಷಿ ಮುಂದುವರೆದು ಎಲ್ಲಾ ಅಳಿಸಿಹೋದ ಕಾರಣ ನೊಂದಾವಣಿ ಕಛೇರಿಯಿಂದ ತಂದು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಮೂಲ ಖರೀದಿ ಪತ್ರಗಳು ನೀರು ಬಿದ್ದು ಅಳಿಸಿಹೋಗಿದ್ದು ಓದಲು ಆಗುವುದಿಲ್ಲ, ಆ ಪೈಕಿ ಸ್ವಲ್ಪ ಪತ್ರಗಳು ಇದ್ದು, ಸ್ವಲ್ಪ ಹಾಳಾಗಿವೆ. ಮೂಲ ಖರೀದಿ ಪತ್ರಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ಐಟಂ ನಂ.11, 15, 16, 18, 19ರ ಆಸ್ತಿಗಳನ್ನು ನನ್ನ ಸ್ವಂತ ಸಂಪಾದನೆಯಿಂದ ಖರೀದಿಸಿಲ್ಲ, ಅವು ಒಟ್ಟು ಕುಟುಂಬದ ಆಸ್ತಿಗಳಾದ ಕಾರಣ ವಾದಿಗಳಿಗೂ ಸಹ ಹಕ್ಕು ಇದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸಹ ನನಗೆ ಆದಾಯ ಇಲ್ಲದಿದ್ದರೂ ಸಹ ಖರೀದಿ ಪತ್ರಗಳನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಿ.16.03.1998ರಂದು ನನ್ನ ತಂದೆ ಮಾಡಿಕೊಟ್ಟ ಮರಣ ಶಾಸನದ ಮೂಲ ದಾಖಲೆಯನ್ನುನನ್ನ ತಮ್ಮ ಎತ್ತಿಕೊಂಡಿರುತ್ತಾರೆ. ಆ ವಿಲ್ ನಾಮೆಯ ಬಗ್ಗೆ ನನ್ನ ತಂದೆ ಮೃತಪಟ್ಟ 4 ವರ್ಷದ ನಂತರ ತಿಳಿಯಿತು. ಮರಣ ಶಾಸನದಲ್ಲಿ ಬರೆದ ವಿಚಾರಗಳು ಗೊತ್ತಿಲ್ಲ. ಆ ವಿಲ್ ಪ್ರಕಾರ ನನಗೆ 1 ಎಕರೆ ಆಸ್ತಿ ಬಂದಿದೆ. ವಾದಿಗಳಿಗೆ ತಿಳಿಯದ ರೀತಿಯಲ್ಲಿ ಮರಣ ಶಾಸನದ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿದ್ದೆ ಎಂದರೆ ಸರಿಯಲ್ಲ. ವಿಚಾರ ಗೊತ್ತಾಗಿ ವಾದಿಗಳು ಉಪ ಆಯುಕ್ತರ ಕಛೇರಿಯಲ್ಲಿ ನನ್ನ ವಿರುದ್ದ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ನಾನು ಮತ್ತು ಇತರೆ ಪ್ರತಿವಾದಿಗಳು ಗುಟ್ಟಾಗಿ ಮಾಡಿಕೊಂಡ ಖಾತೆಯ ಬಗ್ಗೆ ತಿಳಿದುಕೊಂಡ ನಂತರ ವಾದಿಗಳು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ನಿಡಿ 8 ರ ವಿಭಾಗ ಪತ್ರ ನನ್ನ ಚಿಕ್ಕಪ್ಪ ಮತ್ತು ಅವರ ಮಕ್ಕಳು ನಡುವೆ ಆದ ವಿಭಾಗ ಪತ್ರ ಎಂದರೆ ಸರಿ. ಅದನ್ನು ಬಿಟ್ಟರೆ ನಮ್ಮ ತಂದೆ ಮತ್ತು ಮಕ್ಕಳು ಹಾಗೂ ವಾದಿ ಮತ್ತು ಪ್ರತಿವಾದಿಗಳ ನಡುವೆ ವಿಭಾಗ ಪತ್ರ ಆಗಿಲ್ಲ. ಐಟಂ ನಂ. 18 ಮತ್ತು 19ಕ್ಕೆ ಸಂಬಂಧಿಸಿದಂತೆ ಗುಂಡ್ಲುಪೇಟೆ ನ್ಯಾಯಾಲಯದಲ್ಲಿ ಒ ಎಸ್ 46/1999ರಂತೆ ದಾವೆ ಸಲ್ಲಿಸಿದ್ದೇನೆ. ಕ್ರಯವಾದ ಕಾರಣ ಆ ಆಸ್ತಿ ದಾಖಲೆ ನನ್ನ ಹೆಸರಿನಲ್ಲಿತ್ತು, ವಾದಿ ಮತ್ತು ಪ್ರತಿವಾದಿಗಳನ್ನು ಆ ದಾವೆಯಲ್ಲಿ ಸೇರಿಸಿಲ್ಲ. ಆ ದಾವೆಯಲ್ಲಿ ನಾನು ಆಸ್ತಿಯ ಮಾಲೀಕ ಎಂದು

ತೀರ್ಮಾನ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆಸ್ತಿಯ ಮಾಲೀಕ ಎಂದು ತೀರ್ಮಾನ ಮಾಡಿದ್ದರು ಎನ್ನುತ್ತಾರೆ. ದಾವಾ ಆಸ್ತಿಗಳು 32 ½ ಎಕರೆ ಗೆ ದಾವೆ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮಹದೇವಶೆಟ್ಟಿ, ಬಸವರಾಜಶೆಟ್ಟಿ ಮತ್ತು ನಾನು ಅನ್ಯೋನ್ಯವಾಗಿದ್ದೇವೆ. ನಾವು 3 ಜನ ಸೇರಿಕೊಂಡು ವಾದಿಗಳಿಗೆ ಭಾಗಾಂಶ ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. 32 ½ ಎಕರೆ ಆಸ್ತಿಯು ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ಸೇರಿ ಸಂಪಾದಿಸಿದ ಆಸ್ತಿಗಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.